ಹುಬ್ಬಳ್ಳಿ ನಗರದಲ್ಲಿರುವ ಈಜುಕೊಳಕ್ಕೆ ಆಡಳಿತಾಧಿಕಾರಿ ನೇಮಕ

154 (417) ಶ್ರೀ ಅಶೋಕ ಕಾಟ್ಟೆ (ಹುಬ್ಬಳ್ಳಿ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ಹುಬ್ಬಳ್ಳಿ ಶಹರದಲ್ಲಿರುವ ಮಹಾನಗರಪಾಲಿಕೆ ಈಜುಕೊಳವು 1977ರಲ್ಲಿ ನಿರ್ಮಿಸಿ ಇದರ ಹೊಣೆಯನ್ನು ರಾಜ್ಯಕ್ರೀಡಾ ಪ್ರಾಧಿಕಾರ ವಹಿಸಿಕೊಂಡಿದ್ದು, ಇದಕ್ಕೆ ಇದುವರೆಗೆ ಪುರುಷ ಹಾಗೂ ಮಹಿಳಾ ಕೋಚ್‌ಗಳನ್ನು ನೇಮಿಸದಿರಲು ಕಾರಣವೇನು?

2) ಈಜುಕೊಳಕ್ಕೆ ತಿಂಗಳ ಪಾಸ್ ಹೊಂದಿದ ಹಾಗೂ ಪ್ರತಿದಿನ ಟಿಕೇಟು ಪಡೆದು ಬರುತ್ತಿರುವ ಸಂಖ್ಯೆ ಎಷ್ಟು ? ಇದರಿಂದ ಪ್ರತಿವರ್ಷಕ್ಕೆ ಬರತಕ್ಕ ಆದಾಯವೆಷ್ಟು? ನೇಮಿಸಲಾಗಿರುವ ಸಿಬ್ಬಂದಿ ಸಂಖ್ಯೆ ಎಷ್ಟು; ಲೈಫ್‌ಗಾರ್ಡ್ ಅರ್ಹತೆಗಳೇನೇನು? ಈಜು ಕೊಳ ಮಹಾನಗರ ಪಾಲಿಕೆಯಿಂದ ಕ್ರೀಡಾಧಿಕಾರಿಗಳು ವಹಿಸಿಕೊಂಡ ಮೇಲೆ ಈಜು ಕೊಳದಿಂದ ಬಂದ ಆದಾಯವೆಷ್ಟು?

3) ಈಜುಕೊಳಕ್ಕೆ ಓರ್ವ ಆಡಳಿತಾಧಿಕಾರಿಯನ್ನು ಪ್ರತ್ಯೇಕವಾಗಿ ನೇಮಿಸಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

4) ಈಜುಕೊಳದಲ್ಲಿರುವ ನೀರನ್ನು ಶುದ್ದೀಕರಣ ಮಾಡಲು ರಸಾಯನಿಕ ನಿಗದಿತ ಪ್ರಮಾಣದಲ್ಲಿ ಬಳಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಲೀಲಾವತಿ .ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು):

1) ತರಬೇತಿ ಪಡೆದ ಅರ್ಹ ಈಜು ತರಬೇತಿದಾರರ ಕೊರತೆ ಇರುವುದರಿಂದ ಇದುವರೆಗೆ ಪುರುಷ ಹಾಗೂ ಮಹಿಳಾ ತರಬೇತಿದಾರರನ್ನು ನೇಮಿಸಲಾಗಿಲ್ಲ.

2) ಈಜುಗಾರರಿಗೆ ಇದುವರೆವಿಗೆ 1348 ತಿಂಗಳ ಪಾಸ್‌ಗಳನ್ನು ವಿತರಿಸಲಾಗಿದೆ.

ಪ್ರತಿದಿನ ಟಿಕೆಟ್ ಪಡೆದು ಬರುತ್ತಿರುವವರ ಸಂಖ್ಯೆ ಸರಾಸರಿ 120 ರಿಂದ 150

ಈ ಈಜುಕೊಳದಿಂದ ದಿನಾಂಕ 6-3-1997 ರಿಂದ 14-3-1998 ರವರೆಗೆ ರೂ. 3,83,760-00 ಗಳಷ್ಟು ಹಣವನ್ನು ಟಿಕೆಟ್ ಮತ್ತು ಮಾಸಿಕ ಪಾಸ್‌ಗಳ ಮೂಲಕ ಸಂಗ್ರಹಿಸಲಾಗಿರುತ್ತದೆ.

ಈಜುಕೊಳದಿಂದ ದಿನಾಂಕ : 6-3-1997 ರಿಂದ 14-3-1998 ರವರೆಗೆ ರೂ. 3,83,760-00 ಗಳಷ್ಟು ಹಣವನ್ನು ಟಿಕೆಟ್ ಮತ್ತು ಮಾಸಿಕ ಪಾಸ್‌ಗಳ ಮೂಲಕ ಸಂಗ್ರಹಿಸಲಾಗಿರುತ್ತದೆ.

ಈಜುಕೊಳ ನಿರ್ವಹಣೆಗಾಗಿ ಈಗ ತರಬೇತಿದಾರರು ಲೈಫ್‌ಗಾರ್ಡ್‌ಗಳು ಸೇರಿ ಒಟ್ಟು 10 ಜನ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ.

ಲೈಫ್ ಗಾರ್ಡ್‌ಗಳು ಒಳ್ಳೆಯ ಈಜುದಾರರಾಗಿದ್ದು ಒಂದೇ ಬಾರಿಗೆ 400 ಮೀ. ದೂರ ಈಜುವಂತಹವರಾಗಿದ್ದು, ನೀರಿನಲ್ಲಿ 20 ಮೀಟರ್ ಆಳಕ್ಕೆ ಹೋಗುವಂತಹ ಸಾಮರ್ಥ್ಯವಿರುವವರಾಗಿರಬೇಕು ಮತ್ತು ಅವರಿಗೆ ಪ್ರಥಮ ಚಿಕಿತ್ಸಾ ವಿಧಾನ ತಿಳಿದಿರಬೇಕು. ಅಲ್ಲದೆ, ಜೀವರಕ್ಷಕ ತರಬೇತಿ ಹೊಂದಿರಬೇಕು.

ಕರ್ನಾಟಕ ಕ್ರೀಡಾ ಪ್ರಾಧಿಕಾರವು ಈಜುಕೊಳವನ್ನು ದಿನಾಂಕ: 6-3-1977 ರಿಂದ ನಿರ್ವಹಿಸುತ್ತಿದೆ. ದಿನಾಂಕ 6-3-1977 ರಿಂದ 14-3-1998 ರವರೆಗೆ ರೂ. 3,83,760-00 ಗಳನ್ನು ಸಂಗ್ರಹಿಸಿದೆ.

3) ಈ ವಿಷಯವನ್ನು ಪರಿಶೀಲಿಸಲಾಗುವುದು.

4) ಇಲ್ಲ

ಹುಬ್ಬಳ್ಳಿ - ಧಾರವಾಡ ಬೈಪಾಸ್ ರಸ್ತೆಯ ಡಾಂಬರೀಕರಣ

155 (420) ಶ್ರೀ ಅಶೋಕ ಕಾಟ್‌ವೆ (ಹುಬ್ಬಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಹುಬ್ಬಳ್ಳಿ- ಧಾರವಾಡ ಬೈಪಾಸ್ ರೋಡ್ ಎಷ್ಟು ಕಿ.ಮೀ ಉದ್ದವಿದೆ?

ಆ) ಈಗ ಎಷ್ಟು ಕಿ.ಮೀ. ಡಾಂಬರೀಕರಣ ಮಾಡಲಾಗಿದೆ?

ಇ) ಪೂರ್ಣವಾಗಿ ಡಾಂಬರೀಕರಣ ಯಾವಾಗ ಮಾಡಲಾಗುವುದು?

ಶ್ರೀ ಸಿ. ಎ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹುಬ್ಬಳ್ಳಿ - ಧಾರವಾಡ ಹೊರರಸ್ತೆಯ 29.90 ಕಿ.ಮೀ. ಉದ್ದವಿದೆ

ಆ) ಇದುವರೆಗೂ ಸುಮಾರು 3 ಕಿ.ಮೀ ನಷ್ಟು ಡಾಂಬರೀಕರಣ ಮಾಡಲಾಗಿದೆ

ಇ) ಪ್ರಥಮ ಹಂತದ (ಕಿ.ಮೀ 12.47 ರಿಂದ 29.90 ವರೆಗೆ) ಹಾಗೂ 2 ನೇ ಹಂತದ (0.00 ರಿಂದ 12.47 ವರೆಗೆ) ಡಾಂಬರೀಕರಣವು ಸೇರಿದಂತೆ ಇಡೀ ಕಾಮಗಾರಿಯನ್ನು ಖಾಸಗಿ ಸಂಸ್ಥೆಗೆ ವಹಿಸಿದ್ದು ಕರಾರನ್ನು ಮಾಡಿಕೊಳ್ಳಲಾಗಿದೆ. ಕರಾರಿನ ಪ್ರಕಾರ ಕಾಮಗಾರಿಯನ್ನು ನವೆಂಬರ್ 2000 ದಲ್ಲಿ ಪೂರೈಸಲಾಗುವುದು.

ಮಾಗಡಿ - ಹುಲಿಯೂರು ದುರ್ಗ ರಸ್ತೆಯಲ್ಲಿನ ಭೈರನಹಳ್ಳಿ ಸೇತುವೆ ಪುನರ್ ನಿರ್ಮಾಣ

156 (427) ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಮಾಗಡಿ - ಹುಲಿಯೂರು ದುರ್ಗ ರಸ್ತೆಯಲ್ಲಿನ ಭೈರನಹಳ್ಳಿ ಸೇತುವೆಯು ಮುರಿದು ಬಿದ್ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಪರ್ಯಾಯ ರಸ್ತೆ ಸಂಪರ್ಕವಿಲ್ಲದೆ ಸಾರಿಗೆ ಸಂಪರ್ಕಕ್ಕೆ ಅಡಚಣೆಯಾಗಿರುವುದು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ಸೇತುವೆಯ ತುರ್ತು ನಿರ್ಮಾಣಕ್ಕಾಗಿ ಸರ್ಕಾರ ಕ್ರಮ ಕೈಗೊಂಡಿರುವುದೇ?

ಈ) ಇದರ ಪುನರ್ ನಿರ್ಮಾಣದ ಅಂದಾಜು ವೆಚ್ಚ ಎಷ್ಟು?

ಉ) ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು?